KAMD720025302021

<u>ಪ್ರಧಾನ ಸಿವಿಲ್ ನ್ಯಾಯಾಧೀಶರು  ಮತ್ತು ಪ್ರದನ್ಯಾ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ</u>

**ಸಿ.ಸಿ. 1524/2021**

**ದಿನಾಂಕಃ 02.09.2026**

ಫಿರ್ಯಾದಿಃ   ಆನಂದ ಬಿನ್ ಭೈರಪ್ಪ
ವಯಸ್ಸು 48 ವರ್ಷ,
ವಾಸಃ  ಕೊಡಿಯಾಲ ಗ್ರಾಮ
ಅರಕೆರೆ  ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು,ಮಂಡ್ಯ ಜಿಲ್ಲೆ.

–ವಿರುದ್ಧ–

ಆರೋಪಿಃ   ಅಸ್ಮಬಾನು  ಕೋಂ ಗೈಬನ್
ವಯಸ್ಸು  30 ವರ್ಷ,
ವಾಸಃ  ನಂ.368,ಆಸ್ಪತ್ರೆ ರಸ್ತೆ,
ಕೊಡಿಯಾಲ ಗ್ರಾಮ, ಅರಕೆರೆ  ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು,ಮಂಡ್ಯ ಜಿಲ್ಲೆ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>**

**ಪ್ರಃ-ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?**

**ಉ ಃ**

ಪ್ರ.1:- ಪ್ರಾಸಾ1 ಶ್ರೀ ಆನಂದ ಇವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ನಿಮ್ಮ ದರದ್ದು ನಿಮಿತ್ತ ಅಂದರೆ ಕುಟುಂಬದ ಕಾನೂನುಬದ್ದ ಅವಶ್ಯಕತೆಗಾಗಿ ಹಾಗೂ ಕೈ ಸಾಲ ತೀರುವಳಿಗಾಗಿ ಪಿರ್ಯಾದುದಾರರಿಂದ ದಿನಾಂಕಃ20.10.2020 ರಂದು ರೂ.2,00,000/- ಗಳನ್ನು  ಸಾಲವಾಗಿ ಪಡೆದುಕೊಂಡಿದ್ದು, ಸದರಿಸಾಲವನ್ನು 3 ತಿಂಗಳ  ನಂತರ ಮರು ಪಾವತಿ ಮಾಡುವುದಾಗಿ ಹೇಳಿದ್ದು , ಸಾಲ ಪಡೆದ ದಿನದಂದೇ ಸದರಿ  ಸಾಲದ ಮರುಪಾವತಿಗಾಗಿ ಬಾಬ್ತಿಗಾಗಿ ದಿನಾಂಕ 25.01.2021  ರ ಎಂ.ಡಿ.ಸಿ.ಸಿ.  ಬ್ಯಾಂಕ್, ಕೊತ್ತತ್ತಿ ಶಾಖೆ, ಮಂಡ್ಯ ತಾಲೂಕು  ನ  ಚೆಕ್ಕಿನ ಸಂಖ್ಯೆ: 058977  ನ ರೂ.2,00,000/- ನ ಚೆಕನ್ನು ನೀಡಿ, ಸದರಿ ಚೆಕ್ಕನ್ನು ಬ್ಯಾಂಕಿಗೆ ನಗಧೀಕರಣಗೊಳಿಸಲು ತಿಳಿಸಿದ್ದೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ

KAMD720025302021

ಪ್ರ.2- ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ನೀಡಿದ್ದ ಚೆಕ್ಕನ್ನು ತದನಂತರ ಫಿರ್ಯಾದುದಾರರು ಸದರಿ ಚೆಕನ್ನು ನಗದು ಗೊಳಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೊಡಿಯಾಲ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 28.01.2021 ರಂದು "Funds Insufficient" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ.3- ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಮಗೆ ಚೆಕ್ಕು ನಗಧೀಕರಣವಾಗದೇ ಹಿಂದಿರುಗಿರುವ ಬಗ್ಗೆ ತಿಳಿಸಿ, ದಿಃ 15.02.2021 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ.6:-ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ನೋಟಿಸ್ಸು ದಿನಾಂಕ: 19.02.2021 ರಂದು ನೀನು ಪಡೆದಿದ್ದರೂ ಚೆಕ್ಕನ ಬಾಬ್ತು ಹಣವನ್ನಾಗಲಿ ಪಾವತಿ ಮಾಡಿರುದಿಲ್ಲ, ನೋಟೀಸಿಗೆ ಯಾವುದೇ ಪ್ರತ್ಯುತ್ತರವನ್ನು ನೀಡದೆ ಹಾಗೂ ಚೆಕ್ ನ ಅಡಿಯಲ್ಲಿ ಕೊಡಬೇಕಾದ ಯಾವುದೇ ಹಣವನ್ನು ವಾಪಸ್ ಕೊಟ್ಟಿಲ್ಲ ಎಂದು ಹೇಳಿ ನೀವು ಪಿರ್ಯಾದುದಾರರಿಗೆ ನಿಮ್ಮ ಖಾತೆಯಲ್ಲಿ ಹಣವಿಲ್ಲವಿರುವುದೂ ಗೊತ್ತಿದ್ದರೂ ಸಹ ಚೆಕ್ ನೀಡಿ ವಂಚಿಸಿರುತ್ತೀರಿ ಎಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ.7:- ಸದರಿ ಸಾಲದ ತೀರುವಳಿಗಾಗಿ ನೀವು ಖಾತೆ ಹೊಂದಿರುವ ಎಂ.ಡಿ.ಸಿ.ಸಿ. ಬ್ಯಾಂಕ್ , ಕೊತ್ತತ್ತಿ ಶಾಖೆ, ಮಂಡ್ಯ ತಾಲೂಕು ಸೇರಿದ ಚೆಕ್ ಸಂಃ 058977 ದಿನಾಂಕಃ 25.01.2021 ರೂ.2,00,000/- ಗಳಿಗೆ ನಮೂದಿಸಿ ನೀಡಿರುವ ನಿಪಿ 1 ಚೆಕ್ ನಿಮ್ಮದೆ?

ಉಃ

ಪ್ರ.8:- ಸದರಿ ಸಾಲದ ತೀರುವಳಿಗಾಗಿ ನೀವು ಖಾತೆ ಹೊಂದಿರುವ ಎಂ.ಡಿ.ಸಿ.ಸಿ. ಬ್ಯಾಂಕ್ , ಕೊತ್ತತ್ತಿ ಶಾಖೆ, ಮಂಡ್ಯ ತಾಲೂಕು ಸೇರಿದ ಚೆಕ್ ಸಂಃ 058977 ದಿನಾಂಕಃ 25.01.2021 ರೂ.2,00,000/- ಗಳಿಗೆ ನಮೂದಿಸಿ ನೀಡಿರುವ ನಿಪಿ 1 ರಲ್ಲಿರುವ ಚೆಕ್ಕಿನ ಸಹಿ ನಿಮ್ಮದೆ?

ಉಃ

KAMD720025302021

ಪ್ರ.9:- ಸದರಿ ಸಾಲದ ತೀರುವಳಿಗಾಗಿ ನೀವು ಖಾತೆ ಹೊಂದಿರುವ ಎಂ.ಡಿ.ಸಿ.ಸಿ. ಬ್ಯಾಂಕ್ , ಕೊತ್ತತ್ತಿ ಶಾಖೆ, ಮಂಡ್ಯ ತಾಲೂಕು ಸೇರಿದ ಚೆಕ್ ಸಂ: 058977 ದಿನಾಂಕಃ 25.01.2021 ರೂ.2,00,000/- ಗಳಿಗೆ ನಮೂದಿಸಿ ನಿಪಿ 1 ಚೆಕ್ ಅನ್ನು ನೀವು ಪಿರ್ಯಾದಿಗೆ ನೀಡಿರುವಿರಾ?

ಉಃ

ಪ್ರ.10:- ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ರಾಜಿ ಮಾಡಿಕೊಳ್ಳಲು ಇಚ್ಛಿಸುವಿರಾ?

ಉಃ

ಪ್ರ.11:- ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ?

ಉಃ

ಪ್ರ.12:- ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ? ಅವರ ವಿಚಾರಣೆ ಆಗಬೇಕೆ?

ಉಃ

ಪ್ರ.13:-ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ? ಅವುಗಳನ್ನು ಹಾಜರುಪಡಿಸಿಸುವಿರಾ?

ಉಃ

ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಲಯದಲ್ಲಿ ನನ್ನ ಎದುರು ಆರೋಪಿಗೆ ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ ಆರೋಪಿ ಹೇಳಿದ ಉತ್ತರಗಳನ್ನು ಯಥವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

(ಉಮೇಶ.ಎಮ್.ಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ಯಾಲಯ, ಶ್ರೀರಂಗಪಟ್ಟಣ.

ಆರೋಪಿ ಸಹಿಃ

KAMD720025302021

KAMD720025302021